**ದಿನಾಂಕಃ 21.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ 4 ನೇ ಕ್ಲೇಮೆಂಟ್ ಪರ ವಕೀಲರಿಂದಃ-**

ನಾನು ಬಿಕಾಂ ಪದವಿಧರನಿದ್ದೇನೆ. ನನಗೆ ಆಂಗ್ಲಭಾಷೆ ಕೇವಲ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳನ್ನು ತಿಳಿದು , ನಾನು ಸಹಿ ಮಾಡಿ ನ್ಯಾಯಾಲಯಕ್ಕೆ ಹಾಕಿದ್ದೇನೆ. ನನಗೆ ಮುತ್ತಮ್ಮನವರ ಗಂಡನ ಹೆಸರು ಗೊತ್ತಿಲ್ಲ. ಮುತ್ತಮ್ಮ ಎಂದೆ ನನ್ನ ತಂದೆಯ ತಾಯಿ ಇರುತ್ತಾರೆ. ನನ್ನ ತಂದೆಯ ಹೆಸರು ಗಾಳಪ್ಪ ಇರುತ್ತದೆ.1 ನೇ ಕ್ಲೇಮಂಟ್ ಅರಸಮ್ಮ ನನ್ನ ತಂದೆಯ ಅತ್ತೆ ಇರುತ್ತಾರೆ. ಅಂದರೆ ಅವರು ಮಗಳನ್ನು ನನ್ನ ತಂದೆ ಮದುವೆಯಾಗಿದ್ದಾರೆ. ನನಗೆ ಗಾಳಪ್ಪನವರ ತಂದೆಯ ಹೆಸರು ಗೊತ್ತಿಲ್ಲ.

ಸರ್ವೇನಂಬರ್ 36/1 ಈ ಆಸ್ತಿಯನ್ನು ಖರೀದಿ ಮಾಡಿದಾಗಿನಿಂದ 2006-07 ವರೆಗೆ ನಿಮ್ಮ ಸ್ವಾ ಧೀನದಲ್ಲಿ ಇತ್ತು ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಕೆಂಪಯ್ಯನವರು ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ಹೇಳುತ್ತಾರೆ. PW.1 ನರಸಿಂಹ ಮೂರ್ತಿ ನನ್ನ ಮಾವ ಇರುತ್ತಾರೆ. ಸದರಿ PW.1 ರವರು ಹಾಜರುಪಡಿಸಿದ್ದ ನಿಪಿ.29 ರಿಂದ 32 ಪಹಣಿ ಪತ್ರಿಕೆಗಳಲ್ಲಿ 1970-71 ರಿಂದ 2001-02 ರ ವರೆಗೆ ಪಹಣಿಯ ಕಾಲಂ ನಂ.9 ಮತ್ತು 12 ರಲ್ಲಿ ಚೆನ್ನಯ್ಯ ಬಿನ್ ಚೆಲುವಯ್ಯ ಎಂಬ ಹೆಸರು ಇದೆ ಎನ್ನುವುದು ನಿಜ. 1970-71 ರಿಂದ 2001-02 ರ ಪಹಣಿ ಪತ್ರಿಕೆಗಳಲ್ಲಿ ಕೆಂಪಯ್ಯ, ಅರಸಮ್ಮ ಅಥವಾ ಗಾಳಪ್ಪನವರ ಹೆಸರು ಎಲ್ಲಿಯೂ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಸ್ವಾಧೀನ ನಮ್ಮಲ್ಲಿ ಇತ್ತು ಎಂದು ಹೇಳುತ್ತಾರೆ. ನಿಪಿ.29 ರಿಂದ 32 ರಲ್ಲಿ ಕೆಂಪಯ್ಯ, ಅರಸಮ್ಮ ಅಥವಾ ಗಾಳಪ್ಪನವರ ಹೆಸರು ಇಲ್ಲ ಎನ್ನುವುದು ನಿಜ.

ಈ ಪ್ರಕರಣದಲ್ಲಿ ನನ್ನ ತಂದೆ ಗಾಳಪ್ಪ ಮಧ್ಯಂತರ ಅರ್ಜಿ ನಂ.4 ಅನ್ನು ದಿಃ05.08.2022 ರಂದು ಸಲ್ಲಿಸಿ Power of Attorney ಹಾಜರುಪಡಿಸಲು ಅನುಮತಿ ಕೇಳಿದ್ದಾರೆ ಎನ್ನುವುದು ನಿಜ . ಸದರಿ ಮಧ್ಯಂತರ ಅರ್ಜಿ ನಂ.4 ರ ಗೊತೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ನಮ್ಮ ತಂದೆ ಗಾಳಪ್ಪ ಅವರ ತಂದೆಯ ಹೆಸರು ಮುತ್ತಯ್ಯ ಎಂದು ಬೆರದಿದ್ದಾರೆ ಎಂದರೆ ಸಾಕ್ಷಿಯು ಮುತ್ತಯ್ಯ ನನ್ನ ತಂದೆಯ ಸಾಕು ತಂದೆ ಎಂದು ಹೇಳುತ್ತಾರೆ. ನನ್ನ ತಂದೆ ಗಾಳಪ್ಪ ಈಗಲೂ ಜೀವಂತೆ ಇದ್ದಾರೆ. ನಾನು ನನ್ನ ತಂದೆಯ ಬಳಿ ಅವರ ತಂದೆಯ ಹೆಸರನ್ನು ಇವತ್ತಿನವರೆಗೂ ಕೇಳಿ

ತಿಳಿದುಕೊಂಡಿಲ್ಲ. ಗಾಳಪ್ಪನವರಿಗೆ ಅವರ ತಂದೆಯ ಹೆಸರು ಗೊತ್ತಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ನನ್ನ ತಂದೆ ಗಾಳಪ್ಪ ಮತ್ತು ಕೆಂಪಯ್ಯನವರು ಮುತ್ತಯವನರ ದತ್ತು ಮಕ್ಕಳು ಮತ್ತು ಅವರಿಗೆ ಮುತ್ತಯ್ಯನವರು ವಿಲ್ ಮಾಡಿಕೊಟ್ಟಿದ್ದಾರೆ ಎಂದು ನಾನು ಹೇಳಿದ್ದೇನೆ ಎನ್ನುವುದು ನಿಜ . ಗಾಳಪ್ಪ ಮತ್ತು ಕೆಂಪಯ್ಯನವರನ್ನು ಮುತ್ತಯನವರು ದತ್ತು ತೆಗೆದುಕೊಂಡಿದ್ದಾರೆ ಎಂದು ತೋರಿಸುವ ಬಗ್ಗೆ ಮೇಲೆ ಹೇಳಿದ ವಿಲ್ ಅನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ನಾನು ನೋಡಿಲ್ಲ. ಸದರಿ ಮುತ್ತಯ್ಯನವರು ಮಾಡಿದ ಮೂಲ ವಿಲ್ ನನ್ನ ಬಳಿ ಇದೆ ಎನ್ನುವುದು ನಿಜ. ಸಾಕ್ಷಿ ಸ್ವತಃ ಅದನ್ನು ಮಾಗಡಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿದೆ ಎಂದು ಹೇಳುತ್ತಾರೆ. ವಿಲ್ ಅನ್ನು ನಾನು ಪೂರ್ತಿ ಓದಿ ತಿಳಿದುಕೊಂಡಿದ್ದೇನೆ. ಮುತ್ತಯ್ಯನವರು ವಿಲ್ ಅನ್ನು ನೊಂದಾಯಿಸು ಪೂರ್ವದಲ್ಲಿ ಸಂಪೂರ್ಣವಾಗಿ ಓದಿ ಅರ್ಥಮಾಕೊಂಡು ವಿಲ್ ಮಾಡಿದ್ದಾರೆ ಅನ್ನುವುದು ನಿಜ. ಸದರಿ ವಿಲ್ ನಿಪಿ.54 ರ ಪ್ರಕಾರ ಕೆಂಪ್ಪಯ್ಯ ಮುತ್ತಯ್ಯನವರ ಹೆಂಡತಿಯ ಖಾಸಾ ತಮ್ಮ ಎನ್ನುವುದು ನಿಜ. ಸದರಿ ವಿಲ್ ನಿಪಿ.54 ರ ಪ್ರಕಾರ ನನ್ನ ತಂದೆ ಮುತ್ತಯ್ಯನ ಹೆಂಡತಿಯ ತಂಗಿ ಮುತ್ತಮ್ಮನ ಮಗ ಅನ್ನುವುದು ನಿಜ. ನಿಪಿ.54 ರಲ್ಲಿ ಮುತ್ತಯ್ಯನವರು ನನ್ನ ತಂದೆ ಮತ್ತು ಕೆಂಪಯ್ಯನನನ್ನು ದತ್ತು ಮಕ್ಕಳು ಎಂದು ಎಲ್ಲಿಯೂ ಉಲ್ಲೇಖಿಸಿಲ್ಲ ಅನ್ನುವುದು ನಿಜ. ಸಾಕ್ಷಿ ಸ್ವತಃ ಸಾಕು ಮಕ್ಕಳು ಎಂದು ಹೇಳಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ ಸಾಕು ಮಕ್ಕಳು ಎಂದು ಎಲ್ಲಿ ನಮೂದಿಸಿದ್ದಾರೆ ಎಂದರೆ ಸಾಕ್ಷಿಯು ವಿಲ್ ನಲ್ಲಿ ಸಾಕಿಕೊಂಡು ಎಂದು ಬರೆದಿದ್ದನ್ನು ತೋರಿಸುತ್ತಾರೆ. ಮುತ್ತಯ್ಯನವರಿಗೆ ವಿಲ್ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ತಿಳುವಳಿಕೆ ಇದ್ದ ಕಾರಣ ಸರ್ವೇನಂಬರ್ 36/1 ಅನ್ನು ವಿಲ್ ನಲ್ಲಿ ಸೇರಿಸಿಲ್ಲ ಅನ್ನುವುದು ಸರಿಯಲ್ಲ.

ಮುತ್ತಯ್ಯನವರು ಸರ್ವೇನಂಬರ್ 36/1 ಆಸ್ತಿಯನ್ನು ಖರೀದಿಸಿದ ಕ್ರಯಪತ್ರದ ಮೂಲ ಕ್ರಯಪತ್ರವನ್ನು ಎಲ್ಲಿಯೂ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದು ಅರಸಮ್ಮನ ಬಳಿ ಇದೆ ಆಕೆ ಹಾಜರುಪಡಿಸಬಹುದು ಎಂದು ಹೇಳುತ್ತಾರೆ.

ಸರ್ವೇನಂಬರ್ 36/1 ವಿಲ್ ನಲ್ಲಿ ಇಲ್ಲದೇ ಇರುವ ಬಗ್ಗೆ 2005 ರಲ್ಲಿ ಕೆಂಪಯ್ಯನವರು ತೀರಿಕೊಂಡ ಬಳಿಕೆ ತಿಳಿಯಿತು. ನಿಪಿ.54 ವಿಲ್ ನಲ್ಲಿ ನಮ್ಮ ತಂದೆಗೆ ಬಂದ ಆಸ್ತಿಗಳ ಸಂಪೂರ್ಣ ವಿವರಗಳನ್ನು ನನಗೆ ಈಗ ಹೇಳಲು

ಆಗುವುದಿಲ್ಲ. ವಿಲ್ ನಲ್ಲಿ ಬಂದ ಆಸ್ತಿಯ ಬಗ್ಗೆ ನನ್ನ ತಂದೆ ಖಾತೆ ಮಾಡಿಸಿಕೊಂಡಿದ್ದಾರೆ ಅನ್ನುವುದು ನಿಜ. ಆ ರೀತಿ ಖಾತೆಯನ್ನು 2002-03 ಹಾಗೂ 2005-06 ರಲ್ಲಿ ಮಾಡಿಸಿಕೊಂಡಿದ್ದಾರೆ. ಆ ರೀತಿ ಖಾತೆಯನ್ನು ವಿಲ್ ಪತ್ರದ ಆಧಾರ ಮೇಲೆ ಮಾಡಲಾಗಿದೆ. 2006-07 ರಲ್ಲಿ ಆದ ಖಾತೆ ಬದಲಾವಣೆ ನಿಪಿ.54 ವಿಲ್ ಆಧಾರದಲ್ಲಿ ಆಗಿಲ್ಲ ಅನ್ನುವುದು ಸರಿಯಲ್ಲ. ನಿಪಿ.7 ರಲ್ಲಿ ಸರ್ವೇನಂಬರ್ 36 ರ ಖಾತೆ ಬದಲಾವಣೆಯನ್ನು ನಿಪಿ.54 ವಿಲ್ ಪ್ರಕಾರ ಮಾಡಲಾಗಿದೆ ಎಂದು ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿಯು ಆ ರೀತಿ ಉಲ್ಲೇಖಿಸುವುದಿಲ್ಲ ಎಂದು ಹೇಳುತ್ತಾರೆ. ಈಗ ನನಗೆ ತೋರಿಸಿದ 2002-03, 2003-04, 2004-05, 2005-06 ನೇ ಸಾಲಿನ ಆರ್ ಟಿ ಸಿ ಯ ಕಾಲಂ ನಂ.9 ಮತ್ತು 12 ರಲ್ಲಿ ಆಸ್ತಿಯ ಸ್ವಾಧೀನತೆ ಚೆನ್ನಪ್ಪ ಬಿನ್ ಐಯ್ಯಣ್ಣಪ್ಪ ಹಾಗೂ ಸಿಂಗ್ರಪ್ಪ ಬಿನ್ ನರಸಿಂಹಯ್ಯ ಎಂದು ಉಲ್ಲೇಖ ಇದೆ. ಸರ್ವೇನಂಬರ್ 36 ರ ಆರ್ ಟಿ ಸಿ ಯು 2005-06 ರವರೆಗೆ ಚೆನ್ನಪ್ಪನವರ ಮಕ್ಕಳು ಮತ್ತು ಮೊಮ್ಮಕ್ಕನವರ ಹೆಸರಿಲ್ಲಿ ಇತ್ತು ಅನ್ನುವುದು ನಿಜ. ಸಾಕ್ಷಿ ಮುಂದುವರೆದು 2006-07 ರಲ್ಲಿ ಅವರ ಹೆಸರಿಗೆ ಆಗಿದೆ ಎಂದು ಹೇಳುತ್ತಾರೆ. ನಿಪಿ.7 ದಾಖಲೆಯ ಪ್ರಕಾರ ಚೆನ್ನಪ್ಪನವರ ಹೆಸರಿನಲ್ಲಿ ಇದ್ದ 2 ಎಕರೆ 34 ಗುಂಟೆ ಜಮೀನಲ್ಲಿ 1 ಎಕರೆ ಜಮೀನನ್ನು ನಮ್ಮ ಹೆಸರಿಗೆ ಖಾತೆ ಮಾಡಲಾಗಿದೆ ಅನ್ನುವುದು ನಿಜ.

**ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಲಾಯಿತು, ಸಮಯ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**